ಚರ್ಚೆಗಳು ಕೂಡ ನಡೆದಿವೆ. (ಆಸಕ್ತರು ಡಾ. ಪಾದೇಕಲ್ಲು ವಿಷ್ಣು ಭಟ್ಟ ಹಾಗೂ ಡಾ. ಎಂ. ಪ್ರಭಾಕರ ಜೋಶಿಯವರ ಜಂಟಿ ಸಂಪಾದಕತ್ವದ 'ವಾಚಿಕ' ಕೃತಿಯನ್ನು ಗಮನಿಸಬಹುದು). ಪಾಡ್ದನಗಳು ತುಳು–ಕನ್ನಡ ಎರಡೂ ಭಾಷೆಯಲ್ಲಿ ಸಿಗುತ್ತವೆ. ಇನ್ನು ಕೊಣ್ಣೆ ಎನ್ನುವ ವಿಶಿಷ್ಟ ಕುಣಿತಗಾಯನ ಕಥನ ಇರುವುದು ಕನ್ನಡದಲ್ಲಿ ಮಾತ್ರ. ಜಾನಪದದ ಮಾತಂತಿರಲಿ, ಇಲ್ಲಿನ ತುಳು, ಕೊಂಕಣಿ, ಕೊಡವ, ಬ್ಯಾರಿ ಭಾಷೆಯ ಸಾಹಿತ್ಯ ಬಳಸುತ್ತಿರುವ ಲಿಪಿ ಕನ್ನಡದ್ದೇ. ಕೋಲಾರದ ತೆಲುಗರು ಕೂಡ ಕನ್ನಡ ಲಿಪಿಯನ್ನೇ ಬಳಸುತ್ತಿದ್ದರೆಂದು ಕೇಳಿದ್ದೇನೆ. ಅದೇ ರೀತಿ ಅಂತರ್ಜಾಲದಲ್ಲಿ, ಸೆಲ್‌ಫೋನುಗಳಲ್ಲಿ ಹಲವರು ಇವತ್ತಿಗೂ ಕನ್ನಡ ಮಾತಿಗೆ ಇಂಗ್ಲಿಷ್ ಲಿಪಿಯನ್ನೇ ಬಳಸುವ ಪರಿಪಾಠವನ್ನೂ ಇಟ್ಟುಕೊಂಡಿದ್ದಾರೆ. ಇದು ಇವತ್ತಿನ ಕನ್ನಡತನ. ಇದನ್ನು ನಾವು ಒಪ್ಪಿಕೊಳ್ಳಬೇಕಿದೆ, ಸ್ವೀಕರಿಸಬೇಕಿದೆ.

ನಮ್ಮ ರಾಜ್ಯದಲ್ಲೇ ಇವತ್ತು ಜನಸಮುದಾಯದಲ್ಲಿ ಬಳಸಲ್ಪಡುತ್ತಿರುವ ಕನ್ನಡ ಎಷ್ಟೊಂದು ಸಮೃದ್ಧವೂ ವೈವಿಧ್ಯಮಯವೂ ಆಗಿದೆ ಎಂದರೆ ಪ್ರತಿಯೊಂದು ಕನ್ನಡವೂ ಭಿನ್ನ ಮತ್ತು ಅಷ್ಟೇ ಚಂದ. ಉತ್ತರ ಕರ್ನಾಟಕದ ಕನ್ನಡ, ಕುಂದಾಪುರ ಕನ್ನಡ, ಹವ್ಯಕ ಕನ್ನಡ, ಮಂಡ್ಯ ಕನ್ನಡ ಎಂದೆಲ್ಲ ಸ್ವಲ್ಪ ಸೂಕ್ಷ್ಮವಾಗಿ ಗಮನಿಸಿದರೆ ಐವತ್ತು ಅರವತ್ತು ಕಿಲೊಮೀಟರ್ ಅಂತರದಲ್ಲೇ ಕನ್ನಡದ ಲಯ ವಿನ್ಯಾಸ ಬದಲಾಗಿರುತ್ತದೆ! ನಮ್ಮ ಪತ್ರಿಕೆಗಳು ಆಗಾಗ ಈ ಎಲ್ಲ ಭಾಷೆಯ ಸೊಗಡನ್ನು ನಮಗೆ ಅಷ್ಟಿಷ್ಟು ದಕ್ಕಿಸಿದ್ದರಿಂದಲೇ ನಮಗೆ ಈ ಎಲ್ಲ ಭಾಷೆಗಳೂ ಪ್ರಿಯವೇ, ಇಷ್ಟವೇ. ಗ್ರಾಂಥಿಕ ಕನ್ನಡದಲ್ಲಿ ಕ್ರಿಯಾಪದ ಕೊನೆಯಲ್ಲಿ ಬಂದರೆ ಧಾರವಾಡ ಮತ್ತು ಉತ್ತರ ಕರ್ನಾಟಕದ ನುಡಿಯಲ್ಲಿ ಕ್ರಿಯಾಪದ ತನ್ನ ಜಾಗ ಬದಲಿಸಿ ಆರಂಭದಲ್ಲೊ ನಡುವಿನಲ್ಲೊ ಕೂತದ್ದೇ ಭಾಷೆಗೆ ಒಂದು ಕಾವ್ಯದ ಲಯ ದಕ್ಕಿಬಿಡುತ್ತದೆ. ಆಡುಭಾಷೆಯ ಸಾಹಿತ್ಯ ಓದುವುದಕ್ಕೆ ತುಸು ಕಷ್ಟ ಎನಿಸಿದರೂ ಒಮ್ಮೆ ಅದರ ಲಯಕ್ಕೆ ಮನಸ್ಸು ಒಗ್ಗಿದ್ದೇ ಅದು ನಮ್ಮದೇ ಆಗಿಬಿಡುತ್ತದೆ. ಇದು ನಿಜವಾದ ಕನ್ನಡ ಭಾಷೆಯ ಶಕ್ತಿ. ಇಲ್ಲದಿದ್ದರೆ ನಮಗೆ ಬೇಂದ್ರೆ, ದೇವನೂರ ಮಹಾದೇವ, ಸಿದ್ಧಲಿಂಗ ಪಟ್ಟಣಶೆಟ್ಟಿ, ಕುಂ.ವೀ., ಗೀತಾ ನಾಗಭೂಷಣ ಎಲ್ಲ ದಕ್ಕುವುದಿತ್ತೆ?

ದಕ್ಷಿಣಕನ್ನಡದಲ್ಲೇ ಯಕ್ಷಗಾನದ ಪಾತ್ರಗಳು ಆಡುವ ಕನ್ನಡವೇ ಬೇರೆ. ಈಚೆಗೆ ಏಡ್ಸ್ ಬಗ್ಗೆ ಪ್ರಸಂಗ ಬಂದಾಗ ಯಕ್ಷಗಾನದ ಭಾಷೆಯನ್ನು ಹಾಗೆಯೇ ಉಳಿಸಿಕೊಳ್ಳಬೇಕು ಎಂದು ಸಣ್ಣ ಗದ್ದಲವೆದ್ದಿತು. ಹಾಗೆಯೇ ನಾವು ಸಿನಿಮಾಗಳಲ್ಲಿ ಕೇಳುವ ಮಂಗಳೂರು ಕನ್ನಡ ಎನ್ನುವುದೊಂದು ವಾಸ್ತವವಾಗಿ ಅಸ್ತಿತ್ವದಲ್ಲೇ ಇಲ್ಲ. ತುಳು ಅಥವಾ ಕೊಂಕಣಿ ಲಯದಲ್ಲಿಯೇ ಕನ್ನಡ ಮಾತನಾಡುವಾಗ ಆಗುವ ಆಭಾಸವೇ ಮಂಗಳೂರು ಕನ್ನಡ ಎಂದು ಸಾರ್ವತ್ರಿಕವಾಗಿ ಸಿನಿಮಾಗಳಲ್ಲಿ ಬಳಸಲ್ಪಟ್ಟಿದೆ ಅಷ್ಟೇ. ಯಾವ ಉಡುಪಿ ಅಡುಗೆ ಭಟ್ಟರೂ 'ಪ್ರೀತಿ ವಾತ್ಸಲ್ಯ' ಸಿನಿಮಾದ ದಿನೇಶ್ ಬಳಸುವ ಲಯದಲ್ಲಿ 'ನಾವು ಗಟ್ಟದ ತಗ್ಗಿನವರು, ಗೊತ್ತಾಯಿತಲ್ಲ!' ಬಳಸುವುದಿಲ್ಲ. ಅಥವಾ 'ಲವ್ ಮಾಡಿ ನೋಡು' ಸಿನಿಮಾದ ಕಾಶೀನಾಥರಂತೆ 'ನಾನು ಮಂಗಳೂರು ಮಂಜುನಾಥ, ಗೊತ್ತುಂಟಲ್ಲ' ಎನ್ನುವುದಿಲ್ಲ. ಆದರೆ ಸಿನಿಮಾದ ಸೃಷ್ಟಿಯಾದ ಈ ಮಂಗಳೂರು ಕನ್ನಡವನ್ನು ನಾವು ಮಂಗಳೂರಿನವರೇ ತಮಾಷೆಗೆ ಬಳಸಿ ಖುಶಿ ಪಡುತ್ತೇವೆ ಎನ್ನುವುದು ಬೇರೆ ವಿಷಯ!

ಪಿ. ಲಂಕೇಶರ ಒಂದು ಪುಟ್ಟ ಕತೆಯಿದೆ, 'ಡಿಸೋಜಾನ ಊವಿನ ವೃತ್ತಿ' ಎಂದು ಅದರ ಹೆಸರು. ಆರೆಸ್ಸೆಸ್ಸಿನ ಮುದುಕ ಶೇಷಗಿರಿಯವರು ಹೂವು ಮಾರಲು ಹೊರಟ ಡಿಸೋಜಾಗೆ